ಸಾಲ ಮನ್ನಾ

60 (36)

ಶ್ರೀ ಕೆ.ಎಂ.ಶಿವಲಿಂಗೇಗೌಡ (ಅರಸೀಕೆರೆ)

ಅ) ರಾಜ್ಯದಲ್ಲಿ ಸಹಕಾರ ಇಲಾಖೆ ವತಿಯಿಂದ 2012–13ನೇ ಸಾಲಿನಲ್ಲಿ ಯಾವ ದಿನಾಂಕದಿಂದ ರೈತರ ಸಾಲ ಮನ್ನಾ ಮಾಡಲಾಗಿದೆ; ಮನ್ನಾ ಮಾಡಲಾದ ಮೊತ್ತವೆಷ್ಟು?

ಆ) ಇದುವರೆವಿಗೂ ಎಷ್ಟು ಮೊತ್ತವನ್ನು ಸಾಲಮನ್ನಾ ಉದ್ದೇಶಕ್ಕಾಗಿ ಬಿಡುಗಡೆ ಮಾಡಲಾಗಿದೆ?

ಬಿ.ಜೆ.ಪುಟ್ಟಸ್ವಾಮಿ (ಸಹಕಾರ ಸಚಿವರು)

ಅ) ರಾಜ್ಯದ ರೈತರು ಕೃಷಿ ಸಹಕಾರ ಸಂಘಗಳಿಂದ ದಿನಾಂಕ: 01.08.2011 ರಿಂದ 25.07.2012 ರವರೆಗೆ ಪಡೆದು ದಿನಾಂಕ: 25.07.2012ಕ್ಕೆ ಬಾಕಿ ಇರುವ ಬೆಳೆ ಸಾಲವನ್ನು ರೂ. 25,000.00 ವರೆಗೆ ಅಸಲು ಮತ್ತು ಅದಕ್ಕೆ ಸಂಬಂಧಪಟ್ಟ ಬಡ್ಡಿಯೊಂದಿಗೆ ಸಂಪೂರ್ಣ ಮನ್ನಾ ಮಾಡಲಾಗಿದೆ. ಸಾಲ ಮನ್ನಾ ಯೋಜನೆ –2012ರಲ್ಲಿ ಅಂದಾಜು ಅಸಲು ಮೊತ್ತ ರೂ. 3284.44 ಕೋಟಿ ಮತ್ತು ಅದರ ಮೇಲಿನ ಬಡ್ಡಿ ರೂ.345.95 ಕೋಟಿ ಹೀಗೆ ಒಟ್ಟು ರೂ.3630.39 ಕೋಟಿಗಳನ್ನು ಮನ್ನಾ ಮಾಡಲಾಗಿದೆ.

ಆ) ಇದುವರೆವಿಗೂ ರೂ.350.00 ಕೋಟಿಯನ್ನು ಸಾಲ ಮನ್ನಾ ಯೋಜನೆಯಲ್ಲಿ ಬಿಡುಗಡೆ ಮಾಡಲಾಗಿದೆ.

ನೋಂದಾಯಿತ ಸಹಕಾರಿ ಬ್ಯಾಂಕ್ ಸೊಸೈಟಿಗಳ ಮಾಹಿತಿ

52 (32)

ಶ್ರೀ ಎಲ್.ಎ.ರವಿಸುಬ್ರಹ್ಮಣ್ಯ (ಬಸವನಗುಡಿ)

ಅ) ಪ್ರಸ್ತುತ ರಾಜ್ಯದಲ್ಲಿ ನೋಂದಾಯಿತ ಸಹಕಾರ ಸಂಘಗಳ ನಿಯಮದಡಿ ಕಾರ್ಯನಿರ್ವಹಿಸುತ್ತಿರುವ ಸೊಸೈಟಿ ಹಾಗೂ ಬ್ಯಾಂಕುಗಳ ಸಂಖ್ಯೆ ಎಷ್ಟು? (ಸ್ಥಾಪನಾ ವರ್ಷ, ವಿಳಾಸ ಸಹಿತ ವಿವರಗಳನ್ನು ಒದಗಿಸುವುದು)